O.S.64/2017
DW-2

**ಸಾಕ್ಷಿಯನ್ನು ದಿನಾಂಕ 25-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ- ವಾದಿ ಪರ ಶ್ರೀ ಟಿ ಕೆ ಎಂ ವಕೀಲರಿಂದಃ**

**1. 1** ನೇ ಪ್ರತಿವಾದಿಯು ವಾದಿಯ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಏನು ಪರಿಹಾರಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಗಂಗಮ್ಮರವರನ್ನು ನೋಡಿರುತ್ತೇನೆ. ಗಂಗಮ್ಮರವರಿಗೆ ಒಂದು ಜಮೀನು ಮತ್ತು ಒಂದು ಮನೆ ಇತ್ತು. ಸದರಿ ಜಮೀನು ಮತ್ತು ಮನೆಯ ಸ.ನಂಬರ್ ಹಾಗೂ ಖಾತೆ ನಂ ನನ್ನಿಂದ ಹೇಳಲಾಗುವುದಿಲ್ಲ. ಗಂಗಮ್ಮ ಮತ್ತು ಅವರ ಗಂಡ ಕಾವಲಪ್ಪರವರನ್ನು ನಾನು ನೋಡಿರುತ್ತೇನೆ. ಸದರಿಯವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ವಾದಿ ಮತ್ತು ಅವರ ಗಂಡ ಚಿಕ್ಕಣ್ಣರವರನ್ನು ಗಂಗಮ್ಮ ಮತ್ತು ಕಾವಲಪ್ಪರವರು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಗಂಗಮ್ಮರವರು ವೈಯಕ್ತಿಕವಾಗಿ ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಗಂಗಮ್ಮರವರು ಅವರ ಜೀವಿತಾವಧಿಯಲ್ಲಿ ಜಮೀನಿಗೆ ಸಂಬಂಧಿಸಿದಂತೆ ಮುದ್ದನರಸಯ್ಯರವರ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಗಂಗಮ್ಮರವರ ಜೀವಿತಾವಧಿಯಲ್ಲಿ ವಾದಿಗೆ ಏನು ಬರೆದುಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ.

**2.** ದಿಃ **10.06.2015** ರಂದು ಗಂಗಮ್ಮರವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿ ಹೆಸರಿಗೆ ವಿಲ್ ನ್ನು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿಗೆ ಸೇರಿದ ಎಷ್ಟು ಆಸ್ತಿಗಳು ಇರುತ್ತವೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿ ಹಾಗೂ ನನ್ನ ನಡುವೆ ವಿಶ್ವಾಸ ಇರುತ್ತದೆ. ಆ ಕಾರಣ ನಾನು **1** ನೇ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.64/2017
DW-2

Witness of the Plaintiff by name Vijay R present, filed affidavit in lieu of chief examination and examined as DW-2.

Sri. HVS prays time.

For cross of DW 2 by **07.04.2026.**

Civil Judge and JMFC.
*Koratagere.*